ಮುಂದೆ ಕಾರು ನಿಂತಿತು. ಕಾರಿಂದಿಳಿದ ನಾಯ್ಡು ವಸತಿಗೃಹದಲ್ಲಿ ಚಂದನಿಕಾಳನ್ನು ರೂಮೊಂದರಲ್ಲಿ ಕೂರಿಸಿ ತಂಪು ಪಾನೀಯ ತರಿಸಿ ಕೊಟ್ಟವ, ತಾನು ತಕ್ಷಣ ಹೋಗಿ ಅರ್ಧಗಂಟೆಯಲ್ಲಿ ಹಣ ತಂದು ಬಿಡುವುದಾಗಿಯೂ ಅವಳ ಸುರಕ್ಷತೆಗಾಗಿ ಇಲ್ಲಿ ಕೂಡಿಸಿರುವುದಾಗಿಯೂ, ಯಾವ ಭಯಕ್ಕೂ ಕಾರಣವಿಲ್ಲವೆಂದೂ ಆಶ್ವಾಸನೆ ನೀಡಿ ಹೊರಹೋದ. ಒಂದೇ ನಿಮಿಷಕ್ಕೆ ಮತ್ತೆ ಏದುಸಿರಿಡುತ್ತ ಒಳಬಂದ. 'ಇದಕ್ಕೆ ಏನನ್ಬೇಕೋ ತಿಳೀತಿಲ್ಲ. ನಮ್ಮ ಮುಂದಿನ ಸಿನಿಮಾದ ನಿರ್ಮಾಪಕರೂ ಈಗ್ಲೇ ಬರಬೇಕ? ನಿನ್ನ ಹೀರೋಯಿನ್ನಾಗಿ ಹಾಕ್ಕೊಳೋಣ ಅಂದಿದ್ನಲ್ಲ, ಇವರದೇ ಪ್ರಾಜೆಕ್ಟು ಅದು. ಹಣೇಬರಹ ನೋಡು! ನಾನು ಅವರನ್ನ ಬಿಟ್ಟು ಹೋಗಲೇಬೇಕು, ಹಣ ಇಸಕೊಳ್ಳಿಕ್ಕೆ. ಅಕಸ್ಮಾತ್ ನಿನ್ನ ಹತ್ರ ಮಾತಾಡಿದ್ರೆ ಸಂಕೋಚವಿಲ್ಲದೆ ಮಾತಾಡು, ಆತಂಕಪಡಬೇಡ ತಿಳೀತ? ಹತ್ತೆ ನಿಮಿಷದಲ್ಲಿ ಬಂದುಬಿಡತೀನಿ' ಅಂದವ ಹೊರಟುಹೋದ.

ಎರಡು ನಿಮಿಷದಲ್ಲಿ ಬಾಗಿಲ ಬೆಲ್ಲು ಸದ್ದಾಯಿತು. ಬಾಗಿಲಲ್ಲಿ ಇಬ್ಬರು ನಿಂತಿದ್ದರು. 'ಚೆನ್ನಾಗಿದೀರಾ ಅಮ್ಮಾ?' ಅನ್ನುತ್ತ ಒಳಗೆ ಬಂದರು.

ಒಬ್ಬ 'ಗೊತ್ತಾಗಿರ್ಬೇಕು, ನಾವು ನಿಮ್ಮ ಮುಂದಿನ ಪಿಕ್ಚರು ಪ್ರೊಡ್ಯೂಸರುಗಳು. ಕೂತುಕೊಳ್ಳಿ' ಅನ್ನುತ್ತ ತಾನೂ ಕುಳಿತ. ಆತ ಕಪ್ಪಗೆ ದಪ್ಪಗಿದ್ದ. ಕೊರಳಲ್ಲಿದ್ದ ಕಿರುಬೆಳ್ಳು ದಪ್ಪದ ಚಿನ್ನದ ಚೈನು ಅರ್ಧಭಾಗ ಶರಟಿಂದ ಹೊರಗಿತ್ತು. ಕಪ್ಪು ಪ್ಯಾಂಟಿನ ಮೇಲೆ ಕಂದುಬಣ್ಣದ ಬುಶ್ ಶರಟು ಧರಿಸಿದ್ದ. ಮತ್ತೊಬ್ಬ ತೆಳ್ಳಗೆ ಕಂದುಬಣ್ಣದಲ್ಲಿದ್ದವ ಬೂದು ಬಣ್ಣದ ಸಫಾರಿಯಲ್ಲಿದ್ದ. ಅವನ ಮೂರೂ ಬೆರಳುಗಳಲ್ಲಿ ಉಂಗುರಗಳು ಮಿನುಗುತ್ತಿದ್ದುವು. ತೆಳ್ಳಗಿನವ ಅವಳ ಪಕ್ಕದ ಕುರ್ಚಿಯಲ್ಲಿ ಕುಳಿತು ತನ್ನನ್ನು ಸುಂದರೇಶ ಅಂತ ಗುರುತಿಸಿಕೊಂಡು ದಪ್ಪನವನ ಹೆಸರು ಸಣ್ಮುಗಂ ಅಂತ ಹೇಳಿದ.

'ಚಂದನಿಕಾ ಅಲ್ವೇನಮ್ಮ ನಿನ್ಹೆಸರು? ಒಳ್ಳೇ ಸೆಲೆಕ್ಶನ್ನು ನಾಯ್ಡುದು, ಬ್ಯೂಟಿಫುಲ್ಲಾಗಿದಿಯ, ಫಿಲ್ಮು ನೂರುದಿನ ಓಡದಿದ್ರೆ ಹೇಳು! ಮೆಚ್ಚುಗೆಯಾಯ್ತು' ಅಂದವ ವಿನಾಕಾರಣ ದೊಡ್ಡಕೆ ನಕ್ಕ ಸಣ್ಮುಗಂ.

'ನಮ್ಮ ಮುಂದಿನ ಚಿತ್ರಕ್ಕು ನೀನೇ ಹೀರೋಯಿನ್ನು, ನಾಯ್ಡುಗೆ ಹೇಳಿಬಿಡು ಸಾಮಿ' ಅಂದ ಸುಂದರೇಶ. ಒಬ್ಬರು ಮಾತಾಡುವಾಗ ಇನ್ನೊಬ್ಬರ ಕಣ್ಣು ಅವಳ ಶರೀರದ ಮೇಲೇ ಹರಿದಾಡುವುದು ಅನುಭವಕ್ಕೆ ಬರುತ್ತಿತ್ತು.

'ನಾವು ಕಲಾರಸಿಕರು. ಖುಷಿಯಾಯ್ತು ಅಂದ್ರೆ ಆಳೆತ್ತರಕ್ಕು ಉಡುಗೊರೆ ಹಾಕೋ ಕೊಡುಗ್ಯೆ. ಸುಂದ್ರೇಸಗುರು, ಏನಾದ್ರು ತರ್ಸದಲ್ವೇನೋ? ಮೊದಲ ಸಲ ಭೆಟ್ಟಿಯಾಗ್ತಿದೀವಿ' ಸನ್ನೆ ಮಾಡಿದ. 'ನಿಮಗೆ... ಸಾಫ್ಟ್ ಹೇಳೋಣವ? ನಮಗೆ ಪರವಾಗಿಲ್ವ?' ಸ್ನೇಹದ ದನಿಯಲ್ಲಿ ಕೇಳಿದ.

'ಇಲ್ಲ ಸರ್, ನಂಗೇನು ಬೇಡ' ಅಂದಳು. ನಾಯ್ಡು ತಕ್ಷಣ ಬಂದರೆ ಸಾಕಾಗಿತ್ತು ಅವಳಿಗೆ. 'ಇದೇನಮ್ಮ ಇದು? ಈ ಫೀಲ್ಡಲ್ಲಿ ಪಾರ್ಟಿ ಮೋಜು ಅಂತ ಸಿಕ್ರೆ ಯಾರಪ್ಪನ ಗಂಟು ಅಂತಾ ಬಿಂದಾಸಾಗಿ ಅನುಭವಿಸಿಬಿಡಬೇಕು. ಬೇಡ ಅನ್ಲೇಕೂಡದು.' ರೂಮು ಸರ್ವೀಸಿಗೆ ಫೋನು ಮಾಡಿ ಒಂದು ಬ್ಲಾಕ್ ಲೇಬಲ್ ಒಂದು ಬಿಯರ್, ಸಂಗಡ ಯಾವುದೊ ಸ್ನ್ಯಾಕು ಎಲ್ಲ ಹೇಳಿದ. ಚಂದನಿಕಾಳ ಚಡಪಡಿಕೆ ಏರುತ್ತಿತ್ತು.

'ಒಂದು ಸಿನಿಮಾ ಹಿಟ್ಟಾಗ್ಲಿ. ಎರಡನೇದಕ್ಕೆ ನಿನ್ ಸಂಭಾವ್ನೆ ನಾಕುಪಟ್ಟು ಹೆಚ್ಚತ್ತೆ. ಹೆಚ್ಚತ್ತೆ ಏನು, ನಾವೇ ಹೆಚ್ಚಿಸ್ತೀವಿ. ಪೇಪರಲ್ಲಿ ನಮ್ಮವ್ರಿದಾರೆ. ಇಡಿ ಇಡೀ ಪೇಜು ಬರಿಸ್ತೀವಿ. ಬೇರೆಯವ್ರು ಕಾಲ್ಶೀಟು ಕೇಳೋ ಹೊತ್ತಿಗೆ ನಿನ್ ರೇಟು ಕೋಟಿ... ಏನಮ್ಮ? ಕೋಟಿಯಾಗಿರತ್ತೆ' ಅವಳನ್ನಿಡೀ ಬಿಟ್ಟ ಕಣ್ಣುಗಳಲ್ಲಿ ನೋಡುತ್ತ ಹೇಳಿದ ಸಣ್ಮುಗಂ.

ರೂಂ ಸರ್ವೀಸಿನವ ಬಾಟಲಿ, ಗ್ಲಾಸು, ತಿಂಡಿಯನ್ನೆಲ್ಲ ತಂದು ಟೀಪಾಯಿ ಮೇಲಿಟ್ಟು ಹೋದ. ಸುಂದರೇಶ ವಿಸ್ಕಿ ಬಾಟಲಿಯಿಂದ ಎರಡು ಗ್ಲಾಸಿಗೆ ಎರಸಿ, ಬೀರು ಮುಚ್ಚಳ ತೆರೆಯಲು ಹೋದ. 'ಸರ್... ಈಗ್ಲೇ ಬೇಡ, ಸ್ವಲ್ಪ ತಡೆದು' ಅಂದಳು. ಅಷ್ಟರಲ್ಲಿ ನಾಯ್ಡು ಬಂದರೆ ಸಾಕು ಅನ್ನುವುದು ಅವಳ ನಿರೀಕ್ಷೆಯಾಗಿತ್ತು. ಅವರಿಬ್ಬರು ಕುಡಿಯುತ್ತ ಇವಳನ್ನು ಮಾತಿಗೆಳೆಯುತ್ತಿದ್ದರು.

ಸಮಯ ಸರಿದಂತೆ ಅವಳ ಚಡಪಡಿಕೆ ಏರಿತು. ಸಣ್ಮುಗಂ ಸುಂದರೇಶ ಬಿಸಿಯಾಗುತ್ತಲೆ ಹೋಗುತ್ತಿದ್ದರು. 'ಬಿಯರು ಒಡಿಲೇನಪಾ?... ನಾವಿಬ್ರೆ ಮಜಾ ಮಾಡತಿದೀವಿ ಪಾಪ' ತೊದಲುತ್ತ ಅಂದ ಸುಂದರೇಶ. ಮತ್ತೊಂದು ಗುಟುಕು ಒಳಗಿಳಿಸಿದ ಸಣ್ಮುಗಂ ಎದ್ದು ಇವಳ ಪಕ್ಕದಲ್ಲಿ ತಾಗಿ ಕೂತ. 'ಎಷ್ಟು ಸೆಕ್ಸಿಯಾಗಿದೀಯ! ಚಿನ್ನ... ಚಿನ್ನದ ಗುಡ್ಡೆ ಹಾಕ್ಕತೀಯ ಇಂಡಸ್ಟ್ರೀಲಿ' ಅನ್ನುತ್ತ ಕೆನ್ನೆ ಹಿಂಡಿದ. ಮುತ್ತಿಕ್ಕಲು ಬಾಯಿ ಮುಂದೆ ತಂದ. ಗಬ್ಬುವಾಸನೆ ಅಡರಿತು. 'ನಂಗೆ ಹೋಗ್ಬೇಕು...' ಗಾಬರಿಯಲ್ಲಿ ತಡವರಿಸಿ ಎದ್ದಳು. 'ಓ... ಟಾಯಲೆಟ್ಟಿಗಾ? ಹೋಗ್ಬಾ...' ತೊದಲಿದ ಸಣ್ಮುಗಂ.

ಅವಳು ರೂಮಿನ ಬಾಗಿಲಕಡೆ ಧಾವಿಸಿ ತೆರೆದು, ಹೇಗೆ ಮೆಟ್ಟಿಲುಗಳನ್ನು ಇಳಿದಳೋ ಹೋಟೆಲಿನ ಗೇಟಿಗೆ ಓಡುತ್ತ ಹೋಗಿ ನಿಂತವಳು, ರಸ್ತೆಯಲ್ಲಿ ನಾಯ್ಡುನ ಕಾರಿಗಾಗಿ ಹುಡುಕಿದಳು. ಬಸ್ಸಾದರೆ ಬಸ್ಸು, ರಿಕ್ಷಾ ಅದರೆ ರಿಕ್ಷಾ. ತಾನಿಂತವಳು ಅಂತ ಹೇಳಿ ಹೇಗೋ ಮನೆಯವರೆಗೆ ಹೋದರೆ ಸಾಕು ಅಂದುಕೊಳ್ಳುತ್ತಿರುವಾಗ ಗೇಟಿನ ಹತ್ತಿರ ಕಾರಿಂದ ನಾಯ್ಡು ಕೆಳಗಿಳಿದು ಅವಳ ಕಡೆ ಬಂದ. ಅವರು ಕುಡಿದು ತನ್ನ ಮೈಮುಟ್ಟಲು ಬಂದುದನ್ನು ಹೇಳುವಷ್ಟರಲ್ಲಿ ಕಣ್ಣಲ್ಲಿ ನೀರು ತುಂಬಿತು. ಅಲ್ಲಿ ಜನರ ಲಕ್ಷ್ಯ ಸೆಳೆದು ರಂಪವಾಗುವುದು ಬೇಡವೆನಿಸಿತ್ತು. ಹಾಗೇ ಊರಿಗೆ ಹೊರಟು ಬಿಡೋಣ ಅಂತ ನಾಯ್ಡುವನ್ನು ಕೇಳಿಕೊಂಡಳು. ಅವರಿಗೆ ಬಿಸಿಮುಟ್ಟಿಸಿ ಬರುತ್ತೇನೆ, ನೀನು ಇಲ್ಲೆ ಕುಳಿತಿರು ಅಂತ ಕಾರಿನಲ್ಲಿ ಕೂರಿಸಿ ಹೋದವ ಹತ್ತು ನಿಮಿಷದಲ್ಲಿ ವಾಪಸು ಬಂದು ಕಾರು ಚಾಲು ಮಾಡಿದ.

ಏನೂ ಮಾತಾಡದೆ ರಸ್ತೆ ಸಾಗುತ್ತಿತ್ತು. ನಾಯ್ಡುನ ತಲೆ ಕೆಟ್ಟುಹೋಗಿತ್ತು. ಅವರ ಫೋನು ಬಂದಾಗಲೆ ಎಡವಟ್ಟಾದುದು ಗೊತ್ತಾಗಿತ್ತು. ತಕ್ಷಣ ಹೋಟೆಲಿಗೆ ಬಂದಿದ್ದ. ಮತ್ತಷ್ಟು ಕುಡಿದು ಅಸಂಬದ್ಧ ಆರೋಪ ಮಾಡಿದವರನ್ನು ಗದರಿಸಿಯು ಇದ್ದ. ಸಾಂತ್ವನ ಮಾಡಿಯು ಇದ್ದ. ಚೆನ್ನಾಗಿ ಮಾತಾಡಿ ಗೌರವ ಬೆಳೆಯುವಂತೆ ಮಾಡಿಕೊಂಡು ಸ್ನೇಹ ಸಂಪಾದಿಸುವ ತಾಳ್ಮೆ ಚಾಕಚಕ್ಯತೆ ಪ್ರಯೋಗಿಸಬೇಕು. ಅದು ಬಿಟ್ಟು ಅವಳೆದುರೆ ಕುಡಿದು, ಯಾವಳೋ ದಂಧೆ ಮಾಡುವವಳ ಹತ್ತಿರ ವರ್ತಿಸುವಂತೆ, ಗೂಳಿ ಬಿದ್ದಂತೆ ಬಿದ್ದರೆ, ಒಲಿಯುವುದು ಹೇಗೆ ಅಂತ ಗಡುಸಾಗಿಯೆ ಹೇಳಿದ್ದ. ಹಾಗಂತ ಅವರೊಂದಿಗೆ ವಿರಸ ಕಟ್ಟಿಕೊಳ್ಳುವಂತೆಯು ಇಲ್ಲ. ಹಣ ಹಾಕುವವರಿಲ್ಲದೆ ಈ ಕ್ಷೇತ್ರದಲ್ಲಿ ಒಂದುದಿನವು ನಿಲ್ಲುವುದು ಅಸಾಧ್ಯ. ಚಂದನಿಕಾಳ ಮೇಲೂ ಸಿಟ್ಟು ಬಂತು. ವಿಚಿತ್ರವಾಗಿ ಆಡುತ್ತಾಳೆ. ಸ್ವಲ್ಪ ತಾಳ್ಮೆಯಿಂದ ಅವರ ಸ್ನೇಹ ಸಂಪಾದಿಸಿದ್ದರೆ ಅವಳಿಗೂ ಮುಂದೆ ಪ್ರಯೋಜನಕ್ಕೆ ಬರುತ್ತಿತ್ತು, ತನ್ನ ಕೆಲಸವೂ ಸಲೀಸಾಗುತ್ತಿತ್ತು ಅನಿಸುತ್ತಿತ್ತು. ಆದರೆ ತೀರ ಮೊದಲ ಭೆಟ್ಟಿಯಲ್ಲೇ ಇದ್ದಕ್ಕಿದ್ದಂತೆ ಮೈಮೇಲೆ ಕೈಹಾಕಬಂದರೆ ಯಾರಿಗಾದರು ಹೆದರಿಕೆಯಾಗುವುದು ಸಹಜ, ಅದರಲ್ಲು ಇವಳು ಹೊಸಬಳು ಅನ್ನುವ ತರ್ಕವೆ ಮೇಲೆ ಬರುತ್ತಿತ್ತು. ಒಟ್ಟಿನಲ್ಲಿ ಇವತ್ತು ಅವನಿಗೆ ಕರಕರೆಯಾಗಿದ್ದಕ್ಕೆ ಮಾತಿಲ್ಲದೆ ಡ್ರೈವ್ ಮಾಡುತ್ತಿದ್ದ. ಊರು ಹತ್ತಿರ ಬರುತ್ತಿದ್ದಂತೆ ಮನಸ್ಸಿನ ಮೇಲೆ ಸಮತೋಲ ಸಾಧಿಸಿದವ 'ಎಳನೀರು ಕುಡೀತಿದ್ಯ ಚಂದನಿಕ?' ಅಂತ ಕೇಳಿದ. ಅವಳು ಉತ್ತರಿಸುವ ಮೊದಲೆ ಅಕ್ಕಿಆಲೂರು ಹತ್ತಿರ ಕಾರು ನಿಲ್ಲಿಸಿ ಎಳನೀರನ್ನು ಕಾರಿಗೇ ತಂದು ಅವಳಿಗೊಂದು ಕೊಟ್ಟು ತಾನೂ ಕುಡಿದ. ಕಾರು ಮತ್ತೆ ಹೊರಟಿತು.

'ಚಂದನಿಕಾ ಒಂದು ಸಂಗತಿ ಹೇಳ್ತೀನಿ, ಮನನ ಮಾಡಿಕೊ. ಈ ಎತ್ತರಕ್ಕೇರಿರುತ್ತಾರಲ್ಲ ಅಂತವರಲ್ಲೆಲ್ಲಾ ಅಧಿಕಾರ, ಹಣ, ಪ್ರತಿಭೆ, ಖ್ಯಾತಿ ಇವೆಲ್ಲ ಒಂದಲ್ಲ ಒಂದು ಇದ್ದೇ ಇರುತ್ತೆ. ಇದಿರುವಲ್ಲಿ ಒಂದು ಸಣ್ಣ ಮದವೂ ಸೇರಿಕೊಂಡಿರುತ್ತೆ. ನಾವೂ ಆ ಎತ್ತರಕ್ಕೇರಬೇಕಂದ್ರೆ ಅಂತವರೊಂದಿಗೆ ವ್ಯವಹಾರ, ಮುಖಾಮುಖಿ ತಪ್ಪಿದ್ದಲ್ಲ. ಆನೆಯೇನು ಮಾವುತನಿಗಿಂತ ಕಮ್ಮಿಯೆ? ಅದಕ್ಕೇನು ಅವನ ಮಾತು ಕೇಳೋ ಗರಜು ಹೇಳು? ಅದರೆ ಅವನ ಮಾತು ಕೇಳುತ್ತೆ ಅದು. ಹಾಗೆ ಇಲ್ಲಿ ನಾವು ಗೆಲ್ಬೇಕಂದ್ರೆ ಸ್ವಲ್ಪ ಟ್ಯಾಕ್ಟ್‌ಫುಲ್ಲಾಗಿ ವ್ಯವಹರಿಸ್ಬೇಕು. ಆಗಲೆ ಕಾರ್ಯಸಾಧನೆಯಾಗೋದು' ಮತ್ತೆ ಅವಳನ್ನು ದಾರಿಗೆ ತರುವ ಪ್ರಯತ್ನಕ್ಕೆ ಶುರು ಹಚ್ಚಿದ ನಾಯ್ಡು.

ಊರು ಸಮೀಪಿಸಿತು. 'ಚಂದನಿಕಾ ಇದೊಂದು ಸಣ್ಣ ಆಕಸ್ಮಿಕ ಪ್ರಸಂಗವಷ್ಟೆ. ಯಾರ ಹತ್ರವೂ ಹೇಳುತ್ತ ಹೋಗ್ಬೇಡ. ನಿನಗೇ ಮುಜುಗರ. ನಿಂಗಿನ್ನೂ ಬಹಳ ಎತ್ತರ ಏರಲಿಕ್ಕಿದೆ' ಅಂದ.

ಮನೆಗೆ ಬಂದವಳು ಊಟ ಮಾಡಿ, ತಾಯಿಯ ಹತ್ತಿರವೂ ಹೆಚ್ಚು ಮಾತಾಡದೆ, 'ಅಮ್ಮ ಸುಸ್ತಾಗಿದೆ. ಅಡ್ಡಾಗ್ತೀನಿ' ಅಂದವಳು ಮಲಗಿಬಿಟ್ಟಳು.

**(ಸಶೇಷ)**